**ದಿನಾಂಕ: 15-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ-ವಾದಿಯ ಪರ ಶ್ರೀ.ವಿ. ಎಲ್. ಎನ್ , ವಕೀಲರಿಂದ:-**

12. ಈಗ ಸಾಕ್ಷಿಗೆ ಓ. ಎಸ್ ಸಂ. 69/2017ರ ಆದೇಶ ಪುಟಗಳು, ವಾದಪತ್ರ ಮತ್ತು ಹೆಚ್ಚುವರಿ ಪ್ರತಿವಾದಪತ್ರದ ದೃಢೀಕೃತ ನಕಲನ್ನು ತೋರಿಸಿದ್ದು, ಅದರಂತೆ ನೀವು ಶಾಶ್ವತ ನಿರ್ಬಂಧ ತಡೆಯಾಜ್ಞೆಯನ್ನು ಕೋರಿ ದಾವೆಯನ್ನು ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ದಾಖಲೆಗಳನ್ನು ನಿಪಿ-38 ರಿಂದ 40 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ನಿಡಿ-3ನ್ನು ತೋರಿಸಿದ್ದು, ಅದರಲ್ಲಿ ಸಾಲಗಾರರ ಸಹಿ ಇರುವುದಿಲ್ಲ ಮತ್ತು ದಿ.26-02-2020 ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಡಿ-3ರಲ್ಲಿ ಯಾವ ಸರ್ವೆ ನಂಬರ್ ಗೆ ಸಂಬಂಧಿಸಿದಂತೆ ಹಣವನ್ನು ಪಾವತಿ ಮಾಡಲಾಗಿದೆ ಎಂದು ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಈಗ ಸಾಕ್ಷಿಗೆ ನಿಡಿ-3ನ್ನು ತೋರಿಸಿದ್ದು, ಅದರಲ್ಲಿ ದಿ.15-06-2020 ಎಂದು ನಮೂದಿಸಲಾಗಿದೆ ಮತ್ತು ರಾಜ ಸರ್ಕಾರದಿಂದ ಬಡ್ಡಿ ಮನ್ನಾ ಯೋಜನೆ ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಈಗ ಸಾಕ್ಷಿಗೆ ನಿಪಿ-7 ಮತ್ತು ನಿಡಿ-3ನ್ನು ತೋರಿಸಿದ್ದು, ನಿಡಿ-3ರಲ್ಲಿ ನೀವು ಇಂಗ್ಲಿಷ್‌ನಲ್ಲಿ ಸಹಿಯನ್ನು ಮಾಡಿರುತ್ತೀರಾ ಮತ್ತು ನಿಪಿ-7ರಲ್ಲಿ ನೀವು ಕನ್ನಡದಲ್ಲಿ ಸಹಿಯನ್ನು ಮಾಡಿರುತ್ತೀರಾಸಾಕ್ಷಿಯು ಹೌದು ಎನ್ನುತ್ತಾರೆ. ನಾನು ಆಂಗ್ಲ ಮತ್ತು ಕನ್ನಡ ಭಾಷೆ ಎರಡರಲ್ಲೂ ಸಹಿಯನ್ನು ಮಾಡುತ್ತೇನೆ ಎಂದು ಯಾವುದೇ ಪತ್ರಿಕಾ ಪ್ರಕಟಣೆಯನ್ನು ಮಾಡಿಸಿರುವುದಿಲ್ಲ ಮತ್ತು ಯಾವುದೇ ದಾಖಲೆಗಳ ಮೂಲಕ ಅದರ ಬಗ್ಗೆ ಘೋಷಣೆ ಮಾಡಿರುವುದಿಲ್ಲ.

13. ನಿಡಿ-3ರಲ್ಲಿ ದಾವಾಸ್ವತ್ತಿನ ಬಗ್ಗೆ ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣಪತ್ರ ಮತ್ತು ನಿಡಿ-3ರಲ್ಲಿ ಇರುವ ನಿಮ್ಮ ಸಹಿಯಲ್ಲಿ ವ್ಯತ್ಯಾಸ ಇದೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಈಗ

ಸಾಕ್ಷಿಗೆ ನಿಡಿ-2ನ್ನು ತೋರಿಸಿದ್ದು, ಅದರಲ್ಲಿ ಸಾಲಗಾರರ ಸಹಿ ಇರುವುದಿಲ್ಲ ಮತ್ತು ಸರ್ವೆ ನಂಬರ್ ನ್ನು ಸಹ ನಮೂದಿಲಸಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಈ ದಾವೆಗೋಸ್ಕರ ನೀವು ನಿಡಿ-1ರಿಂದ 3ನ್ನು ಸೃಷ್ಟಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಪಿ-7ರಂತೆ ನೀವು ಯಾವುದೇ ಅಭಿವೃದ್ದಿಯನ್ನು ಮಾಡಲು ಸಾಲವನ್ನು ಪಡೆದಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನೀವು ಯಾವುದೇ ಅಭಿವೃದ್ದಿಯನ್ನು ಮಾಡದೇ ಇರುವ ಕಾರಣ ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಕೋರಿದ್ದು, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ,**
**ಮಾಗಡಿ**